**ಸಿವಿಲ್ ನ್ಯಾಯಾಧೀಶರು ಮತ್ತು ಅಧಿಕ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ**

# ಕ್ರಿಮಿನಲ್ ಮೊಖದ್ದಮೆ ಸಂಖ್ಯೆ:*416/2018*

**ಫಿರ್ಯಾದಿ:** ರಾಜ್ಯದ ಪರ ಅಜ್ಜಂಪುರ ಆರಕ್ಷಕರು

**ವಿರುದ್ಧ**

**ಆರೋಪಿ :** ಎಂ.ಜಿ.ಕುಮಾರ ಬಿನ್ ಗಿರಿಯಪ್ಪ,
*36* ವರ್ಷ, ಆಟೋ ರಿಕ್ಷಾ ಚಾಲಕ,
ವಾಸ ಮುಗುಳಿ ಗ್ರಾಮ,
ಅಜ್ಜಂಪುರ ಹೋಬಳಿ,
ತರೀಕೆರೆ ತಾಲ್ಲೂಕು.

## ಆಪಾದನಾ ಸಾರಾಂಶ(ಪ್ಲೀ)

ದಿನಾಂಕ *25-01-2017* ರಂದು ಸಂಜೆ *7-30* ಗಂಟೆಯಲ್ಲಿ ಅಜ್ಜಂಪುರ ಪೊಲೀಸ್ ಠಾಣಾ ಸರಹದ್ದಿನ ಮುಗುಳಿ ಗ್ರಾಮದ ಬೆಣಕುಣಸೆ ಕ್ರಾಸ್ ಬಳಿ ತಮ್ಮಟದಹಳ್ಳಿಯಿಂದ-ಶಿವನಿ ಆರ್.ಎಸ್.ಗೆ ಹೋಗುವ ಟಾರು ರಸ್ತೆಯಲ್ಲಿ ಆರೋಪಿಯಾದ ನೀವು ಕೆಎ-*18*-ಎ-*8611* ಆಪೆ ಆಟೋ ರಿಕ್ಷಾ ಕ್ಯಾಬ್‌ನಲ್ಲಿ ಚಾಸಾ.*2, 3, 4* ಮತ್ತು ಚಾಸಾ.*8* ರವರನ್ನು ಕೂರಿಸಿಕೊಂಡು ಚಾಸಾ.*8* ರವರ ಗಂಡ ಪರಮೇಶ್ವರಪ್ಪರವರನ್ನು ಆಟೋ ರಿಕ್ಷಾದ ಡ್ರೈವರ್ ಪಕ್ಕ ಬಲಭಾಗಕ್ಕೆ ಕೂರಿಸಿಕೊಂಡು ತಮ್ಮಟದಹಳ್ಳಿ ಗ್ರಾಮದಿಂದ ಮಗುಳಿ ಗ್ರಾಮದ ಕಡೆಗೆ ಆಟೋ ರಿಕ್ಷಾವನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದಿದ್ದು, ಇದರಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ *279* ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ.

ಎರಡನೇಯದಾಗಿ ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಆ ರೀತಿ ವಾಹನವನ್ನು ಅತೀ ವೇಗವಾಗಿ ಚಾಲನೆ ಮಾಡಿಕೊಂಡು ಬರುತ್ತಿರುವಾಗ ಮುಗುಳಿ ಗ್ರಾಮದ ಬೆಣಕುಣಸೆ

ಕ್ರಾಸಿನಲ್ಲಿ ಶಿವನಿ ಆರ್.ಎಸ್. ಕಡೆಯಿದ ಎದುರಿಗೆ ಯಾವುದೋ ಟಾಟಾ ಏಸ್ ವಾಹನದ ಚಾಲಕನೂ ಕೂಡ ವಾಹನವನ್ನು ಅತೀವೇಗ ಹಾಗೂ ನಿರ್ಲಕ್ಷತೆಯಿಂದ ಚಾಲನೆ ಮಾಡಿಕೊಂಡು ಬಂದಿದ್ದು, ಎರಡೂ ವಾಹನದ ಚಾಲಕರು ಸೈಡಿಗೆ ಹೋಗದೇ ಪರಸ್ಪರ ಉಜ್ಜಿಕೊಂಡು ಹೋಗಿದ್ದರಿಂದ ಟಾಟಾ ಏಸ್ ವಾಹನದ ಬಾಡಿಯು ಆರೋಪಿ ಪಕ್ಕದಲ್ಲಿ ಕುಳಿತಿದ್ದ ಪರಮೇಶ್ವರಪ್ಪನವರ ಎರಡೂ ಕಾಲುಗಳಿಗೆ ತಗುಲಿ ತೀವ್ರ ಸ್ವರೂಪದ ರಕ್ತಗಾಯಗಳಾಗಿ ಬಿದ್ದಿದ್ದು ಕೂಡಲೇ ಗಾಯಾಳುವನ್ನು ಅಜ್ಜಂಪುರ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಫಾದರ್ ಮುಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿರುವಾಗ ದಿಃ***26-01-2017*** ರಂದು ಬೆಳಗಿನ ಜಾವ ಸುಮಾರು ***2-00*** ರಿಂದ ***3-00*** ಗಂಟೆಯ ಅವಧಿಯಲ್ಲಿ ಮೃತಪಡಲು ಕಾರಣರಾಗಿದ್ದು, ಇದರಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ ***304(ಎ)*** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ.

ಮೂರನೇಯದಾಗಿ ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯಾದ ನಿಮಗೆ ವಾಹನ ಚಾಲನಾ ಪರವಾನಗಿ ಇದ್ದು ಆದರೆ ಅದು ದಿಃ***24-10-2010***ಕ್ಕೆ ಮುಕ್ತಾಯಗೊಂಡಿದ್ದು, ಇದರಿಂದ ನೀವು ಭಾರತೀಯ ಮೋಟಾರ್ ವಾಹನ ಕಾಯಿದೆ ಕಲಂ ***181*** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ.

ನಾಲ್ಕನೇಯದಾಗಿ ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಸದರಿ ಅಪಘಾತವನ್ನುಂಟು ಮಾಡಿ ವಾಹನವನ್ನು ನಿಲ್ಲಿಸದೇ, ಪೊಲೀಸರಿಗೆ ಮಾಹಿತಿಯನ್ನು ನೀಡದೇ ಹೋಗಿದ್ದು, ಇದರಿಂದ ನೀವು ಭಾರತೀಯ ಮೋಟಾರ್ ವಾಹನ ಕಾಯಿದೆ ಕಲಂ ***187*** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ.

ಕೊನೇಯದಾಗಿ ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯಾದ ನೀವು ನಿಮ್ಮ ವಾಹನಕ್ಕೆ ವಿಮೆ ಮಾಡಿಸದೇ ವಾಹನವನ್ನು ಚಲಾಯಿಸಿದ್ದು, ಇದರಿಂದ ನೀವು ಮೋಟಾರ್ ವಾಹನ ಕಾಯಿದೆ ಕಲಂ *196* ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ.

ನೀವು ಏನು ಹೇಳುತ್ತೀರಿ? ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ :

(ಮೇಲ್ಕಂಡ ಆಪಾದನೆಯನ್ನು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಕೇಳಿದ ನಂತರ ಆರೋಪಿ ಕೊಟ್ಟ ಉತ್ತರವನ್ನು ನಾನೇ ಸ್ವತಃ ಯಥಾವತ್ತಾಗಿ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆಯೆಂದು ದೃಢೀಕರಿಸುತ್ತೇನೆ.

ದಿನಾಂಕ *21* ನೇ ಫೆಬ್ರವರಿ *2019.* ಸಹಿ/-

*(ಪವಿತ್ರ.ಎಂ.ಡಿ)*
*ಸಿವಿಲ್ ನ್ಯಾಯಾಧೀಶರು ಮತ್ತು ಅಪ್ರದನ್ಯಾದಂ,*
*ತರೀಕೆರೆ.*